# ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)

ದಿನಾಂಕ 27-05-2020 ರಂದು ಬೆಳಗ್ಗೆ 11.00 ಗಂಟೆಗೆ ನಂ.16-ಡಿ, 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052 ಇಲ್ಲಿ ಜರುಗಿದ ನಿಗಮದ 184ನೇ ನಿರ್ದೇಶಕ ಮಂಡಳ ಸಭೆಯ ನಡವಳಿಗಳು.

ಹಾಜರಿದ್ದವರು:-

1. ಶ್ರೀ ಮೊಹಮದ್ ಮೊಹಸಿನ್ ಐ.ಎ.ಎಸ್.,
ಸರ್ಕಾರದ ಕಾರ್ಯದರ್ಶಿಗಳು, — ಅಧ್ಯಕ್ಷರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಹಾಗೂ ಅಧ್ಯಕ್ಷರು,
ಡಿ.ಬಿ.ಸಿ.ಡಿ.ಸಿ, ಬೆಂಗಳೂರು

2. ಶ್ರೀ ಟಿ.ಹೆಚ್.ಎಂ.ಕುಮಾರ್ ಐ.ಎ.ಎಸ್., — ನಿರ್ದೇಶಕರು
ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು

3. ಶ್ರೀ ಡಿ.ಎಸ್.ಸುದರ್ಶನ್ ಕುಮಾರ್, — ನಿರ್ದೇಶಕರು
ಸರ್ಕಾರದ ಉಪಕಾರ್ಯದರ್ಶಿಗಳು (ಕಲ್ಯಾಣ),
ಆರ್ಥಿಕ ಇಲಾಖೆ,
ವಿಧಾನಸೌಧ, ಬೆಂಗಳೂರು

4. ಶ್ರೀಮತಿ ಸಿ.ಹೇಮಲತ, — ನಿರ್ದೇಶಕರು
ಸರ್ಕಾರದ ಉಪ ಕಾರ್ಯದರ್ಶಿಗಳು,
ಸಾರ್ವಜನಿಕ ಉದ್ದಿಮೆಗಳ ಇಲಾಖೆ,
ಬಹುಮಹಡಿಗಳ ಕಟ್ಟಡ, ಬೆಂಗಳೂರು

5. ಡಾ.ಕೆ.ಎನ್.ವಿಜಯ್‌ಪ್ರಕಾಶ್ — ವ್ಯವಸ್ಥಾಪಕ ನಿರ್ದೇಶಕರು
ವ್ಯವಸ್ಥಾಪಕ ನಿರ್ದೇಶಕರು,
ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ
ಅಭಿವೃದ್ಧಿ ನಿಗಮ, ಬೆಂಗಳೂರು

ಗೈರು ಹಾಜರಾದವರು:-

1. ಶ್ರೀ.ಕೆ.ನಾರಾಯಣ್, — ನಿರ್ದೇಶಕರು
ವ್ಯವಸ್ಥಾಪಕ ನಿರ್ದೇಶಕರು,
ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು
ಮತ್ತು ಅಭಿವೃದ್ಧಿ ನಿಗಮ,
ನವದೆಹಲಿ

ವಿಷಯ ಸಂಖ್ಯೆ-1: ನಿರ್ದೇಶಕ ಮಂಡಳಿಯಲ್ಲಿಯ ಬದಲಾವಣೆಯನ್ನು ದಾಖಲು ಮಾಡುವುದು.

ನಿರ್ಣಯ: ಅ) ಸರ್ಕಾರದ ಅಧಿಸೂಚನೆ ಸಂಖ್ಯೆ ಇ-ಡಿಪಿಎಆರ್ 120 ಎಸ್.ಎ.ಎಸ್ 2019 ದಿನಾಂಕ 13-02-2020ರಲ್ಲಿ ಶ್ರೀ.ಟಿ.ಹೆಚ್.ಎಂ.ಕುಮಾರ್ ಐ.ಎ.ಎಸ್., ಇವರನ್ನು ಶ್ರೀ.ಪಿ.ವಸಂತಕುಮಾರ್ ಐ.ಎ.ಎಸ್., ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಸ್ಥಾನದಲ್ಲಿ ನೇಮಕಮಾಡಿದೆ. ಇವರು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ನಿರ್ದೇಶಕ ಮಂಡಳಿಯಲ್ಲಿ ನಿರ್ದೇಶಕರಾಗಿರುತ್ತಾರೆ

ಆ) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪು ಸಂಖ್ಯೆ:51614/2019, ದಿನಾಂಕ:09-03-2020 ರನ್ವಯ ಡಾ||ಕೆ.ಎನ್.ವಿಜಯಪ್ರಕಾಶ್ ಇವರು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿರುತ್ತಾರೆ. ಇವರು ದಿನಾಂಕ 24-03-2020 ರಂದು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿರುತ್ತಾರೆ.

ನಿರ್ದೇಶಕ ಮಂಡಳಿಯ ಈ ಬದಲಾವಣೆಗಳನ್ನು ದಾಖಲು ಮಾಡಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-2: 183ನೇ ನಿರ್ದೇಶಕ ಮಂಡಳ ಸಭೆಯ ನಡವಳಿಯನ್ನು ದಾಖಲು ಮಾಡುವುದು.

ನಿರ್ಣಯ: ದಿನಾಂಕ 27-12-2019 ರಂದು ನಡೆದ 182ನೇ ನಿರ್ದೇಶಕ ಮಂಡಳ ಸಭೆಯ ನಡವಳಿಯನ್ನು ಓದಿ ದಾಖಲು ಮಾಡಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-3: 183ನೇ ನಿರ್ದೇಶಕ ಮಂಡಳ ಸಭೆಯ ನಡವಳಿಯ ಮೇಲೆ ಕೈಗೊಂಡ ಕ್ರಮಗಳ ಸಮೀಕ್ಷೆ.

ನಿರ್ಣಯ: ದಿನಾಂಕ 27-12-2019 ರಂದು ನಡೆದ ನಡೆದ 183ನೇ ನಿರ್ದೇಶಕ ಮಂಡಳ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮಗಳನ್ನು ದಾಖಲಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-4: ದಿನಾಂಕ 01-04-2019 ರಿಂದ 31-03-2020ರ ವರೆಗಿನ ಪ್ರಗತಿ ಪರಿಶೀಲನೆ.

ನಿರ್ಣಯ: 2019-20ರ ಸಾಲಿಗೆ ಸರ್ಕಾರವು ಆಯವ್ಯಯದಲ್ಲಿ ಒದಗಿಸಿದ ರೂ.2500.00 ಲಕ್ಷ ಹಾಗೂ ನಿಗಮದಲ್ಲಿ ಉಳಿದಿರುವ ಅನುದಾನ/ಸಾಲ ಮರುಪಾವತಿ ಮೊತ್ತ ರೂ.3200.00 ಲಕ್ಷ ಹೀಗೆ ಒಟ್ಟು ರೂ.28200.00 ಲಕ್ಷಗಳಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಒಟ್ಟು 37276 ಹಿಂದುಳಿದ ವರ್ಗಗಳ ಜನರಿಗೆ ಸಾಲ ಸೌಲಭ್ಯ ಒದಗಿಸುವ ಗುರಿ ಹೊಂದಲಾಗಿತ್ತು. ಸರ್ಕಾರವು 2019-20ನೇ ಸಾಲಿಗೆ ಆಯವ್ಯಯದಲ್ಲಿ ಒದಗಿಸಿದ ಮೊತ್ತದಲ್ಲಿ ಒಟ್ಟಾರೆ ರೂ.8500.00 ಲಕ್ಷ ಕಡಿತಗೊಳಿಸಿದೆ ಹಾಗೂ ರೂ.16500.00 ಲಕ್ಷಗಳನ್ನು ಬಿಡುಗಡೆ ಮಾಡಿದೆ. ನಿಗಮದಲ್ಲಿ ಯೋಜನೆಗಳ ಬಳಕೆಯಾಗದೇ ಉಳಿದ ಹಣ ಹಾಗೂ ಸಾಲ ಮರುಪಾವತಿ ರೂ.4959.00 ಲಕ್ಷಗಳನ್ನು ಯೋಜನೆಗಳ ಅನುಷ್ಠಾನಕ್ಕೆ ಬಳಸಲಾಗಿದೆ. ದಿನಾಂಕ 01-04-2019 ರಿಂದ 31-03-2020 ವರೆಗೆ ಸಾಧಿಸಿದ ಪ್ರಗತಿ ವಿವರ ಈ ರೀತಿ ಇದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆ | ಆಯವ್ಯಯ | ಬಿಡುಗಡೆ ಮಾಡಿರುವ ಮೊತ್ತ ಮತ್ತು ಸಾಲ ವಸೂಲಾತಿ/ ಉಳಿಕೆ ಮೊತ್ತ | ಮಾರ್ಚ್-20 ವರೆಗೆ ಮಾಡಲಾದ ವೆಚ್ಚ | ಗುರಿ | |
|---|---|---|---|---|---|---|
| | | | | | ಭೌತಿಕ | ಸಾಧನೆ |
| 1 | 2 | 3 | 4 | 5 | 6 | 7 |
| | ಷೇರು ಬಂಡವಾಳ (4225-03-190-0-01) | 5000.00 | 2500.00 | 4384.90 | 4872 | 7130 |
| 2. | ಸಹಾಯಧನ (ಪರಿಷ್ಕೃತ) (2225-03-190-0-04) | 20000.00 | 14000.00 | 17074.15 | 18383 | 19422 |
| 3 | ಕಳೆದ ಸಾಲುಗಳ ಮೊತ್ತ ಹಾಗೂ ಸಾಲ ಮರುಪಾವತಿ ಪುನರ್ ಬಳಕೆ | 0 | 4959.00 | 0 | 0 | 0 |
| | ಒಟ್ಟು | 25000.00 | 21459.00 | 21459.05 | 23255 | 26552 |
| | ಯೋಜನೆಗಳ ವಿವರ | | | | | |
| 1 | ಶೈಕ್ಷಣಿಕ ಸಾಲ | 5000.00 | 2500.00 | 4384.90 | 4872 | 7130 |
| 2 | ಗಂಗಾ ಕಲ್ಯಾಣ ನೀರಾವರಿ ಯೋಜನೆ | 9500.00 | 3500.00 | 5935.34 | 1750 | 914 |
| 3 | ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ. | 500.00 | 15459.00 | 292.96 | 2500 | 1649 |
| 4 | ಡಿ.ದೇವರಾಜ ಅರಸು ವೈಯಕ್ತಿಕ ನೇರ ಸಾಲ ಯೋಜನೆ | 3000.00 | | 4055.43 | 6000 | 9020 |
| 5 | ಕಿರುಸಾಲ ಯೋಜನೆ | 500.00 | | 290.10 | 3333 | 1934 |
| 6 | ಸಾಂಪ್ರದಾಯಿಕ ವೃತ್ತಿದಾರರ ಹಾಗೂ ಕುಶಲ ಕರ್ಮಿಗಳ ಸಾಲ ಯೋಜನೆ | 2000.00 | | 2502.90 | 4000 | 5840 |
| 7 | ಜನತಾದರ್ಶನ ಮನವಿಗಳಿಗೆ ಸಾಲ ಸೌಲಭ್ಯ | 500.00 | | 47.42 | 800 | 65 |
| 8 | ರಾಷ್ಟ್ರೀಯ ನಿಗಮಕ್ಕೆ ಸಾಲ ಮರುಪಾವತಿ | 3000.00 | | 3000.00 | 0 | 0 |
| 9 | ಆಡಳಿತಾತ್ಮಕ ವೆಚ್ಚ (ಸಹಾಯಧನ ಮೇಲಿನ ಶೇ.5% ರಷ್ಟು) | 1000.00 | | 950.00 | 0 | 0 |
| | ಒಟ್ಟು | 25000.00 | 21459.00 | 21459.05 | 23255 | 26552 |

2019-20ರ ಸಾಲಿಗೆ ಆರ್ಥಿಕ ಗುರಿ ಸಾಧನೆಯು ಶೇ.100 ರಷ್ಟು ಹಾಗೂ ಭೌತಿಕ ಗುರಿ ಸಾಧನೆ ಶೇ.114 ರಷ್ಟು ಆಗಿರುತ್ತದೆ. ಮೇಲ್ಕಂಡಂತೆ ಪ್ರಗತಿಯನ್ನು ದಾಖಲಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ- 5 : 2020-21ರ ಸಾಲಿನ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.

ನಿರ್ಣಯ: ರಾಜ್ಯ ಸರ್ಕಾರವು 2020-21ನೇ ಸಾಲಿನ ಆಯವ್ಯಯದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಸಹಾಯಧನ ಲೆಕ್ಕ ಶೀರ್ಷಿಕೆ 2225-03-190-0-04 ರಲ್ಲಿ ರೂ. 109.19 ಕೋಟಿಗಳನ್ನು ಒದಗಿಸಿರುತ್ತದೆ. ಈ ಮೊತ್ತದಲ್ಲಿ ಈ ಕೆಳಕಂಡಂತೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಸ್ತಾಪಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆ | ಭೌತಿಕ | ಆರ್ಥಿಕ |
|---|---|---|---|
| 1. | 2019-20 ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಯೋಜನೆ ಅನುಷ್ಠಾನ (2019-20 ಸಾಲಿನ ಅಯವ್ಯಯ ಕಡಿತಕ್ಕೆ ಹೊಂದಾಣಿಕೆ) | - | 6000.00 |
| 2. | ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ಸಾಲ ಪಡೆದ ವಿದ್ಯಾರ್ಥಿಗಳಿಗೆ 2,3 ಮತ್ತು 4 ಕಂತಿನ ಮೊತ್ತ ಬಿಡುಗಡೆ ಮಾಡಲು. | 4200 | 3169.00 |
| 3. | ರಾಷ್ಟ್ರೀಯ ನಿಗಮದ ಸಾಲ ಮರುಪಾವತಿ ಮಾಡಲು | - | 1500.00 |
| 4. | ಅಯವ್ಯದಲ್ಲಿ ಘೋಷಿಸಿದ ಹೊಸ ಕಾರ್ಯಕ್ರಮಕ್ಕೆ (ಬೈಕು ಕೊಳ್ಳಲು ಸಹಾಯ ಧನ ಮಂಜೂರಾತಿ) | 1000 | 250.00 |
| | ಒಟ್ಟು | 5200 | 10919.00 |

ಈ ಯೋಜನೆಯನ್ನು 2020-21ರ ಸಾಲಿಗೆ ಮುಂದುವರಿಸಿ ಆದೇಶ ಹೊರಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.

2019-20ರ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿದ್ದ ಈ ಕೆಳಕಂಡ ಯೋಜನೆಗಳನ್ನು ಅನುದಾನ ಲಭ್ಯವಿಲ್ಲದ ಕಾರಣ 2020-21ನೇ ಸಾಲಿಗೆ ಅನುಷ್ಠಾನಗೊಳಿಸಲು ಅವಕಾಶವಾಗುತ್ತಿಲ್ಲ.

1. ಚೈತನ್ಯ ಸಹಾಯಧನ ಯೋಜನೆ.
2. ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ಸಾಲ ಯೋಜನೆ.
3. ಸಾಂಪ್ರದಾಯಿಕ ವೃತ್ತಿದಾರರಿಗೆ ಅರ್ಥಿಕ ನೆರವು ಯೋಜನೆ.
4. ಕಿರು ಸಾಲ ಯೋಜನೆ.
5. ಗಂಗಾ ಕಲ್ಯಾಣ ನೀರಾವರಿ ಯೋಜನೆ.
6. ಅರಿವು-ಶೈಕ್ಷಣಿಕ ಸಾಲ ಯೋಜನೆ
7. ವಿದೇಶಿ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಬಡ್ಡಿ ರಹಿತ ಸಾಲ ಯೋಜನೆ.

ಈ ಮೇಲ್ಕಂಡ ಯೋಜನೆಗಳನ್ನು 2020-21ರ ಸಾಲಿಗೆ ಅನುಷ್ಠಾನಗೊಳಿಸಲು ಹೆಚ್ಚುವರಿಯಾಗಿ ರೂ.250.00 ಕೋಟಿಗಳನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ನಿರ್ದೇಶಕ ಮಂಡಳಿಯ ಗಮನಕ್ಕೆ ತರಲಾಯಿತು.

ಸರ್ಕಾರವು 2020-21ರ ಸಾಲಿಗೆ ಯೋಜನೆಗಳನ್ನು ಮುಂದುವರಿಸಿ, ಆದೇಶ ಹೊರಡಿಸಿದ ನಂತರ ಈ ಸಾಲಿನ ಕ್ರಿಯಾ ಯೋಜನೆ ರೂಪಿಸಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ- 6 :</u> 2019-20ರ ಸಾಲಿಗೆ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮ ಸಾಲ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

<u>ನಿರ್ಣಯ:</u> ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮವು ರಾಜ್ಯಗಳ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳ ಮೂಲಕ, ಹಿಂದುಳಿದ ವರ್ಗಗಳ ಜನರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸಾಲ ಸೌಲಭ್ಯವನ್ನು ರಿಯಾಯಿತಿ ಬಡ್ಡಿ ದರದಲ್ಲಿ ನೀಡುತ್ತದೆ. ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಸಾಲವನ್ನು ಪಡೆಯಲು ಸರ್ಕಾರವು ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 754 ಬಿಎಂಎಸ್ 2018, ದಿನಾಂಕ 20-11-2019 ರಲ್ಲಿ ರೂ.15.00 ಕೋಟಿಗಳ ಸರ್ಕಾರದ ಗ್ಯಾರಂಟಿಯನ್ನು ಒದಗಿಸಿರುತ್ತದೆ. 2019-20ರ ಸಾಲಿಗೆ ಸಾಲ ಸೌಲಭ್ಯ ಒದಗಿಸಲು ರಾಷ್ಟ್ರೀಯ ನಿಗಮವು ದಿನಾಂಕ 31-03-2020 ರಂದು ರೂ.15.00 ಕೋಟಿಗಳನ್ನು ಬಿಡುಗಡೆ ಮಾಡಿದೆ. ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದು ಒಟ್ಟು, 18183 ಅರ್ಜಿಗಳು ಸ್ವೀಕೃತವಾಗಿರುತ್ತದೆ. ರೂ.15.00 ಕೋಟಿಗಳಲ್ಲಿ ಸುಮಾರು 4170 ಹಿಂದುಳಿದ ವರ್ಗಗಳ ಜನರಿಗೆ ಸ್ವಯಂ ಉದ್ಯೋಗಕ್ಕೆ ಸಾಲ ಸೌಲಭ್ಯ ಒದಗಿಸಲು ಕ್ರಮಕೈಗೊಂಡಿರುವುದನ್ನು ದಾಖಲಿಸಲಾಯಿತು.

ವಿಷಯ ಸಂಖ್ಯೆ- 7: 2019-20ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲು ಪ್ಯಾಕೇಜ್‌ವಾರು ಅಂಗೀಕರಿಸಿದ ಕೊಳವೆ ಬಾವಿ ದರ ಹಾಗೂ ಡ್ರಿಲ್ಲಿಂಗ್ ಏಜೆನ್ಸಿಗಳ ನೇಮಕಾತಿ ಅನುಮೋದಿಸುವ ಬಗ್ಗೆ.

ನಿರ್ಣಯ: ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ/1048/ಬಿಎಂಎಸ್/2018 ದಿನಾಂಕ: 16-10-2018 ರಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಗಳ ಪರವಾಗಿ ಕೊಳವೆ ಬಾವಿಗಳನ್ನು ಕೊರೆಯಲು ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳ ಸರಬರಾಜು, ಅಳವಡಿಕೆ ಹಾಗೂ ವಿದ್ಯುದ್ಧೀಕರಣ ಹಾಗೂ 3ನೇ ತಪಾಸಣಾ ಸಂಸ್ಥೆ ಗುರುತಿಸಲು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಟೆಂಡರ್‌ಗಳನ್ನು ಆಹ್ವಾನಿಸಲು ವಿವಿಧ ಟೆಂಡರ್ ಸಮಿತಿಗಳನ್ನು ರಚಿಸಿ ಆದೇಶಿಸಲಾಗಿರುತ್ತದೆ.

2019-20ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲು ರಾಜ್ಯದ 30 ಜಿಲ್ಲೆಗಳನ್ನು 28 ಪ್ಯಾಕೇಜ್‌ಗಳಲ್ಲಿ ಅಳವಡಿಸಿ ಪ್ಯಾಕೇಜ್‌ವಾರು ಟೆಂಡರ್‌ಗಳನ್ನು ರಾಜ್ಯ ಮಟ್ಟದಲ್ಲಿ ಆಹ್ವಾನಿಸಿ ಕೊಳವೆ ಬಾವಿ ಕೊರೆಯುವ ಕೆಲಸಗಳಿಗೆ ಟೆಂಡರ್ ಅಂಗೀಕಾರ ಪ್ರಾಧಿಕಾರ ಅಂಗೀಕರಿಸಿದ ಪ್ಯಾಕೇಜ್‌ವಾರು ಎಲ್-1 ದರ ಹಾಗೂ ಎಲ್-1 ಬಿಡ್‌ದಾರರ ವಿವರಗಳನ್ನು ಸಭೆ ಪರಿಶೀಲಿಸಿತು. ಆಯಾ ಪ್ಯಾಕೇಜ್‌ಗೆ ಅಂಗೀಕರಿಸಿದ ಎಲ್-1 ದರ ಹಾಗೂ ಎಲ್-1 ಟೆಂಡರ್‌ದಾರರನ್ನು ನಿಗಮದಲ್ಲಿ ಅಳವಡಿಸಿಕೊಂಡು ಕೊಳವೆ ಬಾವಿಗಳನ್ನು ಕೊರೆಯಿಸಲು ವಹಿಸಿರುವ ಕ್ರಮವನ್ನು ಸಭೆ ಅನುಸಮರ್ಥಿಸಿತು.

ಒಂದು ವೇಳೆ ಆಯಾ ಪ್ಯಾಕೇಜ್‌ನ ಎಲ್-1 ಟೆಂಡರ್‌ದಾರರು ನಿಗಮದೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಕೊಳವೆ ಬಾವಿಗಳನ್ನು ಕೊರೆಯುವ ಕೆಲಸವನ್ನು ಕೈಗೊಳ್ಳಲು ಮುಂದೆ ಬಾರದೆ ಇದ್ದಲ್ಲಿ ಆಯಾ ಪ್ಯಾಕೇಜ್‌ನ ಎಲ್-

2/ಎಲ್-3 ಟೆಂಡರ್‌ದಾರರು ಎಲ್-1 ದರಗಳಂತೆ ಕೆಲಸ ಕೈಗೊಳ್ಳಲು ಒಪ್ಪಿ ಮುಂದೆ ಬಂದಲ್ಲಿ ಅಂತಹ ಟೆಂಡರ್‌ದಾರರಿಗೆ ಕಾರ್ಯಾದೇಶ ನೀಡಲು ಹಾಗೂ ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಪ್ಯಾಕೇಜ್‌ಗಳ ಎಲ್-1 ಟೆಂಡರ್‌ದಾರರು ನಿಗಮದೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳದೆ ಇರುವುದರಿಂದ ಈ ಎರಡು ಪ್ಯಾಕೇಜ್‌ಗಳಿಗೆ ಮರು ಟೆಂಡರ್ ಆಹ್ವಾನಿಸಿ ಎಲ್-1 ಬಿಡ್‌ದಾರರ ವಿರುದ್ಧ ಟೆಂಡರ್ ನಿಯಮಾನುಸಾರ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ- 8: ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಇ-ಜನ ಸ್ಪಂದನ ಕಾರ್ಯಕ್ರಮ ಹಾಗೂ ಜನಸ್ಪಂದನ ಕೋಶಕ್ಕೆ ಸಲ್ಲಿಸಲಾದ ಅರ್ಜಿಗಳಿಗೆ ಸಾಲ ಮಂಜೂರಾತಿ ಕುರಿತು.

ನಿರ್ಣಯ: ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಲ್ಲಿ ಸಾಲ ಸೌಲಭ್ಯ ಕೋರಿ ಇ-ಜನ ಸ್ಪಂದನ ಹಾಗೂ ಜನ ಸ್ಪಂದನ ಕೋಶಕ್ಕೆ ಸಲ್ಲಿಸಿರುವ ಮನವಿಗಳಿಗೆ ಸ್ವಯಂ ಉದ್ಯೋಗಕ್ಕೆ ನಿಗಮದಿಂದ ಸಾಲ ಸೌಲಭ್ಯವನ್ನು ಹಾಗೂ ಗಂಗಾ ಕಲ್ಯಾಣ ಯೋಜನೆಯಲ್ಲಿ ನೀರಾವರಿ ಸೌಲಭ್ಯ ಒದಗಿಸಲು ಸನ್ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ಮನವಿಗಳನ್ನು ಕಳುಹಿಸಿರುತ್ತಾರೆ.

2019-20ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಈ ಮನವಿಗಳಿಗೆ ಸಾಲ ಸೌಲಭ್ಯಗಳನ್ನು ಒದಗಿಸಲು ರೂ.5.00 ಕೋಟಿಗಳನ್ನು ಕಾಯ್ದಿರಿಸಲಾಗಿದೆ. ದಿನಾಂಕ 27.12.2019ರಂದು ನಡೆದ 183ನೇ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರ ಕಾರ್ಯಾಲಯದ ಹಿರಿಯ ಅಧಿಕಾರಿಗಳಿಂದ, ಇ-ಜನಸ್ಪಂದನ ಹಾಗೂ ಜನಸ್ಪಂದನ ಕೋಶದಿಂದ ಸ್ವೀಕೃತಗೊಂಡ 210 ಮನವಿದಾರರಿಗೆ ಒಟ್ಟಾರೆ ತಲಾ ರೂ.50,000/-ಗಳಂತೆ ರೂ.105.00 ಲಕ್ಷಗಳನ್ನು ಮಂಜೂರು ಮಾಡಲು ನಿರ್ದೇಶಕ ಮಂಡಳಿಯು ಅನುಮೋದನೆ ನೀಡಿರುತ್ತದೆ.

183ನೇ ನಿರ್ದೇಶಕ ಮಂಡಳಿ ಸಭೆಯ ನಂತರ ಸನ್ಮಾನ್ಯ ಮುಖ್ಯಮಂತ್ರಿಯವರ ಕಾರ್ಯಾಲಯದ ಹಿರಿಯ ಅಧಿಕಾರಿಗಳು, ಜನ ಸ್ಪಂದನ ಕೋಶ ಮತ್ತು ಇ-ಜನ ಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕರಿಸಿದ ಮನವಿಗಳ ಪೈಕಿ ಅರ್ಹ 92 ಮನವಿಗಳಿಗೆ ಈ ಕಾರ್ಯಕ್ರಮಕ್ಕೆ ನಿಗದಿಪಡಿಸಿದ ಆರ್ಥಿಕ ಗುರಿ ರೂ.500.00 ಲಕ್ಷಗಳಲ್ಲಿ ಉಳಿದ ರೂ.395.00 ಲಕ್ಷಗಳಲ್ಲಿ ಪರಿಗಣಿಸಿ ತಲಾ ರೂ.50,000/-ಗಳಂತೆ ರೂ.46.00 ಲಕ್ಷ ಸಾಲ ಸೌಲಭ್ಯ ಮಂಜೂರಾತಿಗೆ ಸಂಬಂಧಿಸಿದಂತೆ ಜಿಲ್ಲಾ ವ್ಯವಸ್ಥಾಪಕರು ಅರ್ಹತೆ ಬಗ್ಗೆ ಪರಿಶೀಲಿಸಿ, ವರದಿ ನೀಡುವಂತೆ ಎಲ್ಲಾ ಜಿಲ್ಲಾ ಕಛೇರಿಗಳಿಗೆ ಮನವಿಗಳನ್ನು ಕಳುಹಿಸಲು ತೀರ್ಮಾನಿಸಲಾಯಿತು ಹಾಗೂ ಮನವಿದಾರರ ಅರ್ಹತೆ ಪರಿಶೀಲಿಸಿ, ಸಾಲ ಸೌಲಭ್ಯ ಮಂಜೂರು ಮಾಡಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲು ತೀರ್ಮಾನಿಸಲಾಯಿತು.

ಸನ್ಮಾನ್ಯ ಮುಖ್ಯಮಂತ್ರಿಯವರ ಕಾರ್ಯಾಲಯದ ಹಿರಿಯ ಅಧಿಕಾರಿಗಳು, ಜನಸ್ಪಂದನ ಕೋಶ ಹಾಗೂ ಇ-ಜನ ಸ್ಪಂದನ ಕಾರ್ಯಕ್ರಮದಲ್ಲಿ ಇನ್ನೂ ಹೆಚ್ಚಿನ ಅರ್ಹ ಮನವಿಗಳು ಸ್ವೀಕೃತಗೊಳ್ಳುತ್ತಿದ್ದು. ಅವುಗಳನ್ನು ಸಹ ಪರಿಗಣಿಸಿ ಸ್ವಯಂ ಉದ್ಯೋಗ ಸಾಲ ಸೌಲಭ್ಯ ಮಂಜೂರಾತಿ ಹಾಗೂ ಗಂಗಾ ಕಲ್ಯಾಣ ಯೋಜನೆಯಲ್ಲಿ ನೀರಾವರಿ ಸೌಲಭ್ಯ ಒದಗಿಸಲು ನಿಯಮಾನುಸಾರ ಕ್ರಮವಹಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-9</u> : ದೇವರಾಜ ಅರಸು ಭವನದ ವಾರ್ಷಿಕ ನಿರ್ವಹಣೆಗೆ ರೂ.30.00 ಲಕ್ಷಗಳನ್ನು 2 ಕಂತುಗಳಲ್ಲಿ ನಿಗಮದ ವತಿಯಿಂದ ದೇವರಾಜ ಅರಸು ಮೆಮೋರಿಯಲ್ ಟ್ರಸ್ಟ್‌ಗೆ ಪಾವತಿಸಿರುವ ಕುರಿತು.

<u>ನಿರ್ಣಯ</u>: ದಿನಾಂಕ:04.10.2019 ರಂದು ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ದೇವರಾಜ ಅರಸು ಭವನದ ವಾರ್ಷಿಕ ನಿರ್ವಾಹಣೆಯ ಸಭೆಯ ನಡವಳಿಯನ್ವಯ ದೇವರಾಜ ಅರಸು ಭವನದ ವಾರ್ಷಿಕ ನಿರ್ವಾಹಣೆಗೆ ಅಂದಾಜು ರೂ.1.00 ಕೋಟಿ ವೆಚ್ಚವಾಗಲಿದ್ದು, ಈ ಪೈಕಿ ಶೇ.30%

ಅಂದರೆ ರೂ.30.00 ಲಕ್ಷಗಳನ್ನು 2 ಕಂತುಗಳಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ದೇವರಾಜ ಅರಸು ಮೆಮೋರಿಯಲ್ ಟ್ರಸ್ಟ್‌ಗೆ ಪಾವತಿಸಲು ತೀರ್ಮಾನಿಸಲಾಗಿರುತ್ತದೆ. ನಿರ್ದೇಶಕ ಮಂಡಳಿಯ ತೀರ್ಮಾನದಂತೆ, ಮೊದಲನೇ ಕಂತಿನ ಮೊತ್ತ ರೂ.15.00 ಲಕ್ಷಗಳನ್ನು ದಿನಾಂಕ 18-01-2020 ರಂದು ಪಾವತಿಸಲಾಗಿದೆ.

ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರು ದಿನಾಂಕ:23-04-2020ರ ಪತ್ರದಲ್ಲಿ ಎರಡನೇ ಕಂತಿನ ಹಣ ಬಿಡುಗಡೆ ಮಾಡುವಂತೆ ಕೋರಿದ್ದು, ಸದರಿ ಮೊತ್ತ ರೂ.15.00 ಲಕ್ಷಗಳನ್ನು ಮಾನ್ಯ ಅಧ್ಯಕ್ಷರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರ ಅನುಮತಿ ಪಡೆದು ದಿನಾಂಕ 07-05-2020 ರಂದು ದೇವರಾಜ ಅರಸು ಮೆಮೋರಿಯಲ್ ಟ್ರಸ್ಟ್‌ಗೆ ಪಾವತಿಸಿದೆ. ದೇವರಾಜ ಅರಸು ಭವನದ ನಿರ್ವಹಣೆಯ ಎರಡನೇ ಕಂತಿನ ವೆಚ್ಚ ರೂ.15.00 ಲಕ್ಷಗಳನ್ನು ನಿಗಮದಿಂದ ಪಾವತಿಸಿರುವುದನ್ನು ಸ್ಥಿರೀಕರಿಸಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ- 10 :</u> 2019-20ರ ಸಾಲಿನ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಲು ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಕಾತಿ ಮಾಡುವ ಬಗ್ಗೆ.

<u>ನಿರ್ಣಯ:</u> ಕಂಪನಿ ಕಾಯ್ದೆ 2013ರ ಸೆಕ್ಷನ್ 138(1)ರನ್ವಯ ನಿಗಮದ ಲೆಕ್ಕ ಪತ್ರಗಳನ್ನು ಪರಿಶೀಲಿಸಲು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡಬೇಕಾಗಿರುತ್ತದೆ. 2019-20ರ ಸಾಲಿಗೆ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಸ್ವಯಂ ಉದ್ಯೋಗ ಸಾಲದ ಯೋಜನೆಗಳು, ಶೈಕ್ಷಣಿಕ ಸಾಲದ ಯೋಜನೆಗಳು, ಗಂಗಾ ಕಲ್ಯಾಣ ನೀರಾವರಿ ಯೋಜನೆ ಯೋಜನೆಗಳಲ್ಲಿ 26552 ಹಿಂದುಳಿದ ವರ್ಗಗಳ ಜನರಿಗೆ ರೂ. 175.09 ಕೋಟಿ ಸಾಲ ಹಾಗೂ ಸಬ್ಸಿಡಿ ಒದಗಿಸಲಾಗಿದೆ. ಸಾಲ ವಸೂಲಾತಿಯು ರೂ.22.56 ಕೋಟಿ ಆಗಿರುತ್ತದೆ.

ಈ ಸಾಲಿನಲ್ಲಿ ಅಧಿಕಾರಿಗಳು/ನೌಕರರ ಸಂಬಳ, ಮುದ್ರಣ, ಲೇಖನಾ ಸಾಮಗ್ರಿ, ದೂರವಾಣಿ, ಬಾಡಿಗೆ, ಜಾಹೀರಾತು, ರಾಷ್ಟ್ರೀಯ ನಿಗಮಕ್ಕೆ ಬಡ್ಡಿ ಪಾವತಿ, ಸರ್ಕಾರದ

ಗ್ಯಾರಂಟಿ ಕಮಿಷನ್ ಪಾವತಿ ಮೊದಲಾದವುಗಳ ಬಗ್ಗೆ ಸುಮಾರು ರೂ. 11.17 ಕೋಟಿ ವೆಚ್ಚವಾಗಿರುತ್ತದೆ ಹಾಗೂ ಹಿಂದುಳಿದ ವರ್ಗಗಳ ಜನರಿಗೆ ನೀಡಿದ ಸಾಲದ ಮೇಲಣ ಬಡ್ಡಿ, ಉಳಿತಾಯ ಖಾತೆ/ಠೇವಣಿಗಳ ಮೇಲೆ ಒಟ್ಟು ಬಡ್ಡಿ ಸೇರಿ ಸುಮಾರು ರೂ.10.30 ಕೋಟಿ ಆದಾಯ ಬಂದಿರುತ್ತದೆ.

ಜಿಲ್ಲಾ ಕಛೇರಿಗಳಲ್ಲಿ ಸಾಲದ ದಾಖಲಾತಿ ಪರಿಶೀಲನೆ, ಕ್ಯಾಶ್ ಪುಸ್ತಕ, (ಕ್ಯಾಶ್ ರಶೀದಿ ಮತ್ತು ಇಂಪ್ರೆಸ್ಟ್ ವೆಚ್ಚ), ಲೆಡ್ಜರ್ ಪರಿಶೀಲನೆ, ಬ್ಯಾಂಕ್ ರಿಕನ್ಸಿಲಿಯೇಶನ್ ಕೆಲಸ ನಿರ್ವಹಿಸಲು 2 ಮಂದಿ ಆಡಿಟರ್ಸ್ 2 ದಿನ ಆಡಿಟ್ ಕೆಲಸ ನಿರ್ವಹಿಸಬೇಕಾಗುವುದು. ವಿಭಾಗ ಕಛೇರಿಯಲ್ಲಿ 2 ಮಂದಿ ಆಡಿಟರ್ಸ್ ಹಾಗೂ ಒಬ್ಬ ಸೀನಿಯರ್ 2 ದಿನ ಆಡಿಟ್ ಕೆಲಸ ನಿರ್ವಹಿಸಬೇಕಾಗಬಹುದು. ಕೇಂದ್ರ ಕಛೇರಿಯಲ್ಲಿ 2 ಮಂದಿ ಆಡಿಟರ್ ಮತ್ತು 2 ಸೀನಿಯರ್ಸ್ 15 ದಿನ ಆಡಿಟ್ ಕೆಲಸ ನಿರ್ವಹಿಸಬೇಕಾಗುವುದು.

2019-20ರ ಸಾಲಿಗೆ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯಲ್ಲಿ ನೊಂದಾಯಿತ ಆಡಿಟರ್ಸ್‌ನ ಪ್ಯಾನಲ್‌ನಿಂದ 4 ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಂಡು 2019-20ರ ಸಾಲಿನ ಯೋಜನೆಗಳ ಅನುಷ್ಠಾನ ವೆಚ್ಚ, ಆದಾಯ ಮತ್ತು ವೆಚ್ಚಗಳ ಬಗ್ಗೆ ಆಂತರಿಕ ಲೆಕ್ಕ ಪರಿಶೋಧನೆ ಮಾಡಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-11:</u> ಅಂಧ ಮತ್ತು ಅಂಗವಿಕಲರ ರಾಜ್ಯ ಸರ್ಕಾರಿ ನೌಕರರಿಗೆ ವಾಹನ ಭತ್ಯೆ ದರಗಳ ಪರಿಷ್ಕರಣೆಯ ಆದೇಶವನ್ನು ನಿಗಮದ ನೌಕರರಿಗೆ ಅಳವಡಿಸುವ ಬಗ್ಗೆ.

<u>ನಿರ್ಣಯ:</u> ರಾಜ್ಯ ಸರ್ಕಾರದ ವಿಶೇಶ ಚೇತನ ಸಿಬ್ಬಂದಿಗಳು ಅಂದರೆ, ಅಂಧ ಮತ್ತು ಅಂಗವಿಕರ ರಾಜ್ಯ ಸರ್ಕಾರಿ ನೌಕರರಿಗೆ ಹಾಲಿ ನೀಡುತ್ತಿರುವ ವಾಹನ ಭತ್ಯೆ ದರವನ್ನು 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ಮೂಲ ವೇತನದ ಶೇ.6ರ ದರದಲ್ಲಿ ಮಾಹೆಯಾನ ಯಾವುದೇ ಗರಿಷ್ಟ ಮಿತಿಯಿಲ್ಲದೆ 1ನೇ ಜನವರಿ 2019 ರಿಂದ ಜಾರಿಗೆ ಬರುವಂತೆ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 24 ಎಸ್‌ಆರ್‌ಪಿ 2018 (V11) ಬೆಂಗಳೂರು

ದಿನಾಂಕ: 11.01.2019ರಲ್ಲಿ ಆದೇಶ ಹೊರಡಿಸಿರುತ್ತದೆ. ಸರ್ಕಾರದ ಆದೇಶದನ್ವಯ, ನಿಗಮದ ವಿಶೇಷ ಚೇತನ ಸಿಬ್ಬಂದಿಗಳು ಪರಿಷ್ಕೃತ ವಾಹನ ಭತ್ಯೆ ಮಂಜೂರು ಮಾಡುವಂತೆ ಕೋರಿರುತ್ತಾರೆ. ಸರ್ಕಾರದ ಸದರಿ ಆದೇಶವನ್ನು ನಿಗಮದಲ್ಲಿ ಅಳವಡಿಸಿಕೊಂಡು ನಿಗಮದ ವಿಶೇಷ ಚೇತನ ಸಿಬ್ಬಂದಿಗಳಿಗೆ ಪರಿಷ್ಕೃತ ವಾಹನ ಭತ್ಯೆ ಸೌಲಭ್ಯ ಒದಗಿಸಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ- 12 :</u> ಶ್ರೀಮತಿ.ಪ್ರವೀಣಾ.ಎಸ್.ದೇಶಪಾಂಡೆ, ಕ್ಲರ್ಕ್-ಕಂ-ಬೆರಳಚ್ಚುಗಾರರು, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಇವರ ನಿಯೋಜನಾ ಸೇವಾ ಅವಧಿಯನ್ನು ವಿಸ್ತರಿಸಿರುವ ಬಗ್ಗೆ ನಿರ್ದೇಶಕ ಮಂಡಳಿಯ ಅನುಮೋದನೆ ಕುರಿತು.

<u>ನಿರ್ಣಯ:</u> ಶ್ರೀಮತಿ.ಪ್ರವೀಣಾ.ಎಸ್.ದೇಶಪಾಂಡೆ, ಕ್ಲರ್ಕ್ – ಕಂ – ಬೆರಳಚ್ಚುಗಾರರು, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಇವರ ನಿಯೋಜನಾ ಸೇವಾ ಅವಧಿಯನ್ನು ವಿಸ್ತರಿಸಿರುವ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳುವಂತೆ ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-13 :</u> ಶ್ರೀಮತಿ. ಟಿ.ಪ್ರಿಯದರ್ಶಿನಿ, ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕೊಪ್ಪಳ ಜಿಲ್ಲೆ, ಕೊಪ್ಪಳ, ಇವರ ವಿರುದ್ಧ ದಾಖಲಾದ ಲಂಚ ಪ್ರಕರಣದಲ್ಲಿ ಎ.ಸಿ.ಬಿ ಟ್ರಾಪ್‌ಗೆ ಒಳಪಟ್ಟ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡಿರುವ ಕ್ರಮದ ಘಟನೋತ್ತರ ಅನುಮತಿ ಕುರಿತು.

<u>ನಿರ್ಣಯ:</u> ಶ್ರೀಮತಿ ಟಿ. ಪ್ರಿಯದರ್ಶಿನಿ, ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ(ನಿ), ಕೊಪ್ಪಳ ಇವರು ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಲಂಚ ಪ್ರಕರಣಕ್ಕೆ ಸಂಬಂಧಪಟ್ಟಂತೆ ಭ್ರಷ್ಟಾಚಾರ ನಿಗ್ರಹ ದಳ ಬಲೆಗೆ ಸಿಕ್ಕಿಬಿದ್ದಿದ್ದು, ಸದರಿಯವರ ವಿರುದ್ಧ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಅಭಿಯೋಜನಾ ಮಂಜೂರಾತಿ ಆದೇಶ ಹೊರಡಿಸುವಂತೆ ಭ್ರಷ್ಟಾಚಾರ ನಿಗ್ರಹ ದಳ ಇಲಾಖೆಯ ಕೋರಿಕೆಯ ಮೇರೆಗೆ ಅದರಂತೆ ಸದರಿ ಪ್ರಕರಣದ ಕುರಿತು ಸದರಿಯವರ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ರ ಕಲಂ:7(ಎ) ರಡಿ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು, ಭ್ರಷ್ಟಾಚಾರ

ಪ್ರತಿಬಂಧಕ ಕಾಯ್ದೆ 1988ರ ಕಲಂ: 19(1)(ಸಿ) ರನ್ವಯ ಅಭಿಯೋಜನೆಗೊಳಪಡಿಸಲು ಸಕ್ಷಮ ಸಕ್ಷಮ ಪ್ರಾಧಿಕಾರವಾದ ನಿಗಮದಿಂದ ದಿನಾಂಕ:20.01.2020ರ ಆದೇಶ ಸಂಖ್ಯೆ: ದೇಹಿನಿ/ಸಿಬ್ಬಂದಿ/ಎಸಿಬಿ/ಸಿ.ಆರ್-113/2018-19ರಲ್ಲಿ ಅಭಿಯೋಜನಾ ಮಂಜೂರಾತಿ ನೀಡಲಾಗಿರುತ್ತದೆ. ಈ ಕ್ರಮವನ್ನು ನಿರ್ದೇಶಕ ಮಂಡಳಿಯ ಅನುಸಮರ್ಥಿಸಲು ತೀರ್ಮಾನಿಸಲಾಯಿತು. ಇನ್ನೂ ಮುಂದೆ ಇಂತಹ ಪ್ರಕರಣಗಳಿಗೆ ವ್ಯವಸ್ಥಾಪಕ ನಿರ್ದೇಶಕರಿಗೆ ಪದತ್ತವಾದ ಅಧಿಕಾರದನ್ವಯ ಅಭಿಯೋಜನೆ ಮಂಜೂರಾತಿ ನೀಡಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-14 :</u> ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮವನ್ನು ಕಂಪನಿ ಕಾಯ್ದೆ 2013ರ ಸೆಕ್ಷನ್ 7ರ ಅಡಿಯಲ್ಲಿ ನೋಂದಾಯಿಸಿ ಸ್ಥಾಪಿಸಿರುವ ಬಗ್ಗೆ.

<u>ನಿರ್ಣಯ:</u> ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮವನ್ನು ಕಂಪನಿ ಕಾಯ್ದೆ 2013ರ ಸೆಕ್ಷನ್ 7ರ ಅಡಿಯಲ್ಲಿ ನೋಂದಾಯಿಸಿರುವುದನ್ನು ದಾಖಲಿಸಲಾಯಿತು. ಈ ನಿಗಮದ ಸ್ಥಾಪನೆಗೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಪಾವತಿಸಿದ ಪ್ರಾರಂಭಿಕ ವೆಚ್ಚ ರೂ.59,251/- ಗಳನ್ನು ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮದಿಂದ ಪುನರ್ ಭರ್ತಿ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ- 15 :</u> ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮಂಡ್ಯ ಜಿಲ್ಲೆಯ ಜಿಲ್ಲಾ ಕಛೇರಿಯನ್ನು ನಾಗರೀಕ ಸೌಕರ್ಯಗಳಿಗೆ ಕಾಯ್ದಿರಿಸಲಾದ ನಿವೇಶನವನ್ನು ಪಡೆಯುವ ಕುರಿತು.

<u>ನಿರ್ಣಯ:</u> ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಗಳಲ್ಲಿ ವಿವಿಧ ಯೋಜನೆಗಳಲ್ಲಿ ಸಾಲ ಮಂಜೂರು ಮಾಡಿರುವ ಫಲಾನುಭವಿಗಳ ಕಡತಗಳು, ಮಹತ್ವದ ದಾಖಲಾತಿಗಳು ಮತ್ತು ಸಾಲದ ಲೆಡ್ಜರ್‌ಗಳನ್ನು ಸುರಕ್ಷಿತವಾಗಿಡಲು ಜಿಲ್ಲಾ ಕಛೇರಿಗಳು ತಮ್ಮದೇ ಆದ ನಿವೇಶನವನ್ನು ಪಡೆದು ಸ್ವಂತ ಕಟ್ಟಡ ಹೊಂದುವ ಅವಶ್ಯಕತೆಯಿರುತ್ತದೆ. ಈ ರೀತಿ ಸ್ವಂತ ಕಟ್ಟಡ ಹೊಂದಲು ನಿಗಮದ ಅಧಿಕಾರಿಗಳಿಗೆ

ಸೂಕ್ತ ಕ್ರಮವಹಿಸುವಂತೆ ತಿಳಿಸಲಾಗಿರುತ್ತದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಇವರಿಗೆ ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ನಾಗರೀಕ ಸೌಕರ್ಯಗಳಿಗೆ ಕಾಯ್ದಿರಿಸಲಾದ ನಿವೇಶನವನ್ನು ಮಂಜೂರು ಮಾಡುವಂತೆ ಕೂಡ ಕೋರಲಾಗಿರುತ್ತದೆ.

ನಿಗಮದ ಪತ್ರಗಳನ್ವಯ, ನಿಗಮದ ಮಂಡ್ಯ ಜಿಲ್ಲೆಯ ಜಿಲ್ಲಾ ಕಛೇರಿಯನ್ನು ಮಂಡ್ಯ ನಗರದಲ್ಲಿರುವ ವಿವೇಕಾನಂದ ನಗರ ಬಡಾವಣೆಯಲ್ಲಿ ಲಭ್ಯವಿರುವ ೩೦*೩೦ ಮೀಟರ್=೯೦೦ ಚದುರ ಮೀಟರ್ ಸಿ.ಎ ನಿವೇಶನ ಸಂಖ್ಯೆ:13ಎ/4ನ್ನು ೩೦ ವರ್ಷಗಳ ಗುತ್ತಿಗೆ ಅವಧಿಗೆ ಸರ್ಕಾರಿ ಇಲಾಖೆಗಳಿಗೆ ನೀಡುವ ೫೦% ದರದಂತೆ ಪ್ರತಿ ಚದರ ಮೀಟರ್‌ಗೆ ರೂ.೮೦೦೦/- ರಂತೆ ರೂ.೩೬,೦೦,೦೦೦ ಲಕ್ಷಗಳು ಹಾಗೂ ನೋಂದಣಿ ಶುಲ್ಕ ರೂ.೧,೦೦೦/-ಗಳು ಹೀಗೆ ಒಟ್ಟು ರೂ.೩೬,೦೧,೦೦೦/-ಗಳನ್ನು ಪಾವತಿಸಿ ೩೦ ವರ್ಷಗಳ ಅವಧಿಗೆ ಗುತ್ತಿಗೆ ಒಪ್ಪಂದ ಪಡೆಯಲು ಅನುಮತಿ ಕೋರಿರುತ್ತಾರೆ.

ಮಂಡ್ಯ ನಗರದಲ್ಲಿರುವ ವಿವೇಕಾನಂದ ನಗರ ಬಡಾವಣೆಯಲ್ಲಿ ಲಭ್ಯವಿರುವ ೩೦*೩೦ ಮೀಟರ್=೯೦೦ ಚದುರ ಮೀಟರ್ ಸಿ.ಎ ನಿವೇಶನ ಸಂಖ್ಯೆ:13ಎ/4ನ್ನು ೩೦ ವರ್ಷಗಳ ಗುತ್ತಿಗೆ ಅವಧಿಗೆ ಸರ್ಕಾರಿ ಇಲಾಖೆಗಳಿಗೆ ನೀಡುವ ೫೦% ದರದಂತೆ ಪ್ರತಿ ಚದರ ಮೀಟರ್‌ಗೆ ರೂ.೮೦೦೦/- ರಂತೆ ರೂ. ೩೬,೦೦,೦೦೦ ಲಕ್ಷಗಳು ಹಾಗು ನೋಂದಣಿ ಶುಲ್ಕ ರೂ.೧,೦೦೦/-ಗಳು ಹೀಗೆ ಒಟ್ಟು ರೂ.೩೬,೦೧,೦೦೦/-ಗಳನ್ನು ಪಾವತಿಸಿ ೩೦ ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ ನಿರ್ದೇಶಕ ಮಂಡಳಿಯ ಅನುಸಮರ್ಥನೆಗೊಳಪಟ್ಟು ಸರ್ಕಾರಕ್ಕೆ ದಿನಾಂಕ:26.02.2020 ರಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿರುವುದನ್ನು ಸ್ಥಿರೀಕರಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ– 16 : ಕನ್ನಡ ಮಾಸ ಪತ್ರಿಕೆ, ಸ್ಮರಣ ಸಂಚಿಕೆ, ಡೈರಿ, ದಿನಪತ್ರಿಕೆ, ವಿಶೇಷಾಂಕಗಳು, ಪಾಕ್ಷಿಕ ಪತ್ರಿಕೆ ಮುಂತಾದವುಗಳಿಗೆ ನಿಗಮದ ಜಾಹಿರಾತು ನೀಡುವ ಕುರಿತು.

ನಿರ್ಣಯ: ಸರ್ಕಾರದ ಆದೇಶದನ್ವಯ ಎಲ್ಲಾ ಜಾಹೀರಾತುಗಳನ್ನು ಕಡ್ಡಾಯವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮೂಲಕ ಬಿಡುಗಡೆ ಮಾಡಬೇಕಾಗಿರುತ್ತದೆ. ಕನ್ನಡ ಮಾಸ ಪತ್ರಿಕೆ, ಸ್ಮರಣ ಸಂಚಿಕೆ, ಡೈರಿ, ದಿನಪತ್ರಿಕೆ, ವಿಶೇಷಾಂಕಗಳು, ಪಾಕ್ಷಿಕ ಪತ್ರಿಕೆ ಮುಂತಾದವುಗಳಿಗೆ ಜಾಹೀರಾತು ನೀಡುವ ಅವಶ್ಯಕತೆ ಸದ್ಯಕ್ಕೆ ಇರುವುದಿಲ್ಲವೆಂದು ಗಮನಿಸಲಾಯಿತು. ಆದಾಗ್ಯೂ ಅನಿವಾರ್ಯತೆ ಮತ್ತು ಸಾಂದರ್ಭಿಕ ಅವಶ್ಯಕತೆಗನುಗುಣವಾಗಿ ಅಧ್ಯಕ್ಷರ ಅನುಮತಿ ಪಡೆದು ಜಾಹೀರಾತು ನೀಡಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ–17 : ಸರ್ಕಾರವು ನೀಡಿದ ಅನುದಾನದ ಮೇಲೆ ಗಳಿಸಿದ ಬಡ್ಡಿ ಮೊತ್ತವನ್ನು ಸರ್ಕಾರದ ಖಾತೆಗೆ ಜಮಾ ಮಾಡುವ ಬಗ್ಗೆ.

ನಿರ್ಣಯ: ಸರ್ಕಾರವು ನಿಗಮದ ಯೋಜನೆಗಳ ಅನುಷ್ಟಾನಕ್ಕೆ ಒದಗಿಸಿದ ಅನುದಾನ ಮೊತ್ತವನ್ನು ಯೋಜನೆ ಅನುಷ್ಟಾನಗೊಳ್ಳುವವರೆಗೆ ಬ್ಯಾಂಕ್‌ಗಳಲ್ಲಿ ಉಳಿತಾಯ ಖಾತೆ/ಅಲ್ಪಾವಧಿ ಠೇವಣಿಯಾಗಿ ಇಡಲಾಗಿದ್ದು, ಅದರ ಮೇಲಿನ ಬಡ್ಡಿ ಮೊತ್ತವನ್ನು ಆಯಾ ಯೋಜನೆಗಳಿಗೆ ಸೇರ್ಪಡೆ ಮಾಡಲಾಗುತ್ತಿದೆ. ಪ್ರಸ್ತುತ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 24 ಟಿಎಆರ್ 2019 ದಿನಾಂಕ 27-08-2019ರಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೇಲೆ ಗಳಿಸಿದ ಬಡ್ಡಿ ಮೊತ್ತವನ್ನು ಆಯಾ ವರ್ಷದ ಅಂತ್ಯಕ್ಕೆ ಕಡ್ಡಾಯವಾಗಿ ಲೆಕ್ಕ ಶೀರ್ಷಿಕೆ 0049-04-800-06-01 "ಠೇವಣಿ ಖಾತೆಗಳಿಂದ ಸ್ವೀಕೃತವಾದ ಬಡ್ಡಿ" ರಡಿಯಲ್ಲಿ ಜಮೆ ಮಾಡಲು ತಿಳಿಸಲಾಗಿದೆ. ಸರ್ಕಾರವು ನಿಗಮಕ್ಕೆ ಆಡಳಿತ ವೆಚ್ಚ ಭರಿಸಲು ಯಾವುದೇ ಅನುದಾನವನ್ನು ಒದಗಿಸುತ್ತಿಲ್ಲ. ನಿಗಮವು ಅನುದಾನ ಯೋಜನೆಗಳಲ್ಲಿ ಬಳಕೆಯಾಗದೇ ಇರುವ ಅನುದಾನದ ಮೇಲೆ ಗಳಿಸಿದ ಬಡ್ಡಿಯನ್ನು ಆಡಳಿತ ವೆಚ್ಚಕ್ಕೆ ಹೊಂದಾಣಿಕೆ ಮಾಡಿಕೊಂಡು ಹೆಚ್ಚುವರಿ ಉಳಿಕೆಯಾದಲ್ಲಿ, ಉಳಿಕೆ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-18(1): 2018-19ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲು ಪ್ಯಾಕೇಜ್‌ವಾರು ಅಂಗೀಕರಿಸಿದ ಕೊಳವೆ ಬಾವಿ ದರ ಹಾಗೂ ಡ್ರಿಲ್ಲಿಂಗ್ ಏಜೆನ್ಸಿಗಳ ನೇಮಕಾತಿ ಅನುಮೋದಿಸುವ ಬಗ್ಗೆ.

ನಿರ್ಣಯ: ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ/1048/ಬಿಎಂಎಸ್/2018, ಬೆಂಗಳೂರು ದಿನಾಂಕ:16-10-2018ರಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಗಳ ಪರವಾಗಿ ಕೊಳವೆ ಬಾವಿಗಳನ್ನು ಕೊರೆಯಲು ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳ ಸರಬರಾಜು, ಅಳವಡಿಕೆ ಹಾಗೂ ವಿದ್ಯುದ್ದೀಕರಣ ಹಾಗೂ 3ನೇ ತಪಾಸಣಾ ಸಂಸ್ಥೆ ಗುರುತಿಸಲು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಟೆಂಡರ್‌ಗಳನ್ನು ಆಹ್ವಾನಿಸಲು ವಿವಿಧ ಟೆಂಡರ್ ಸಮಿತಿಗಳನ್ನು ರಚಿಸಿ ಆದೇಶಿಸಲಾಗಿರುತ್ತದೆ.

2018-19ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲು ರಾಜ್ಯದ 30 ಜಿಲ್ಲೆಗಳನ್ನು 31 ಪ್ಯಾಕೇಜ್‌ಗಳಲ್ಲಿ ಅಳವಡಿಸಿ ಪ್ಯಾಕೇಜ್‌ವಾರು ಟೆಂಡರ್‌ಗಳನ್ನು ರಾಜ್ಯ ಮಟ್ಟದಲ್ಲಿ ಆಹ್ವಾನಿಸಿ, ಟೆಂಡರ್ ಪ್ರಕ್ರಿಯೆ ಕೈಗೊಂಡು 30 ಪ್ಯಾಕೇಜ್‌ಗಳಿಗೆ ಟೆಂಡರ್ ಅಂಗೀಕಾರ ಪ್ರಾಧಿಕಾರ ಅಂಗೀಕರಿಸಿರುವ ಪ್ಯಾಕೇಜ್‌ವಾರು ಎಲ್-1 ದರ ಹಾಗೂ ಎಲ್-1 ಬಿಡ್‌ದಾರರ ವಿವರಗಳನ್ನು ಸಭೆ ಪರಿಶೀಲಿಸಿ ಇದರಂತೆ ನಿಗಮದಲ್ಲಿ ಅಳವಡಿಸಿಕೊಂಡು ಈ ಸಾಲಿನ ಕೊಳವೆ ಬಾವಿಗಳನ್ನು ಕೊರೆಯಿಸಲು ಕೈಗೊಂಡಿರುವ ಕ್ರಮವನ್ನು ಸಭೆ ಅನುಸಮರ್ಥಿಸಿತು.

ಕೊಳವೆ ಬಾವಿಗಳಿಗೆ ಎಂ.ಎಸ್.ಕೇಸಿಂಗ್ ಪೈಪ್ ಅಥವಾ ಯುಪಿವಿಸಿ ಕೇಸಿಂಗ್ ಪೈಪ್ ಪೈಕಿ ಯಾವುದಾದರೂ ಒಂದು ಮಾದರಿ ಕೇಸಿಂಗ್ ಪೈಪ್ ಅಳವಡಿಸಲು ಅವಕಾಶ ಇರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಎಂ.ಎಸ್.ಕೇಸಿಂಗ್ ಪೈಪ್ ಬಳಕೆ ಮಾಡುವ ಪ್ಯಾಕೇಜ್‌ಗಳಲ್ಲಿ ಯುಪಿವಿಸಿ ಕೇಸಿಂಗ್ ಪೈಪ್‌ಗೆ ಅತಿ ಕಡಿಮೆ ದರ ನಮೂದಿಸಿರುವುದನ್ನು ಹಾಗೂ ಇದೇ ರೀತಿ ಯುಪಿವಿಸಿ ಕೇಸಿಂಗ್ ಪೈಪ್ ಬಳಕೆ

ಮಾಡುವ ಪ್ಯಾಕೇಜ್‌ಗಳಲ್ಲಿ ಎಂ.ಎಸ್. ಕೇಸಿಂಗ್ ಪೈಪ್‌ಗೆ ಅತಿ ಕಡಿಮೆ ದರ ನಮೂದಿಸಿರುವುದನ್ನು ಸಭೆ ಅವಗಾಹಿಸಿತು. ಆಯಾ ಪ್ಯಾಕೇಜ್‌ಗೆ ಅಗತ್ಯವಿರುವ ಕೇಸಿಂಗ್ ಪೈಪಿನ ವಿಧದ ಮಾಹಿತಿ ಆಧಾರಿಸಿ ಯಾವುದಾದರೂ ಒಂದು ಮಾದರಿ ಕೇಸಿಂಗ್ ಪೈಪಿಗೆ ದರ ಆಹ್ವಾನಿಸುವ ಬಗ್ಗೆ ಸಾಧಕ ಬಾಧಕಗಳನ್ನು ಪರಿಶೀಲಿಸಿ ಮುಂದಿನ ಟೆಂಡರ್‌ಗಳಲ್ಲಿ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸಭೆ ಸೂಚಿಸಿತು.

ಒಂದು ವೇಳೆ ಆಯಾ ಪ್ಯಾಕೇಜ್‌ನ ಎಲ್-1 ಟೆಂಡರ್‌ದಾರರು ನಿಗಮದೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಕೊಳವೆ ಬಾವಿಗಳನ್ನು ಕೊರೆಯುವ ಕೆಲಸವನ್ನು ಕೈಗೊಳ್ಳಲು ಮುಂದೆ ಬಾರದೆ ಇದ್ದಲ್ಲಿ ಆಯಾ ಪ್ಯಾಕೇಜ್‌ನ ಎಲ್-2/ಎಲ್-3 ಟೆಂಡರ್‌ದಾರರು ಎಲ್-1 ದರಗಳಂತೆ ಕೆಲಸ ಕೈಗೊಳ್ಳಲು ಒಪ್ಪಿ ಮುಂದೆ ಬಂದಲ್ಲಿ ಅಂತಹ ಟೆಂಡರ್‌ದಾರರಿಗೆ ಕಾರ್ಯಾದೇಶ ನೀಡಲು ಹಾಗೂ ಟೆಂಡರ್‌ನಲ್ಲಿ ಒಂದೇ ಬಿಡ್ ಸ್ವೀಕೃತಗೊಂಡಿರುವ ರಾಯಚೂರು ಪ್ಯಾಕೇಜ್‌ಗೆ ಮರು ಟೆಂಡರ್ ಆಹ್ವಾನಿಸಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-18(2):</u> ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯಿಸುವ ಕೊಳವೆ ಬಾವಿಗಳ ತಪಾಸಣೆ ಮತ್ತು ಸರಬರಾಜು ಮಾಡುವ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳ ತಪಾಸಣೆಯನ್ನು 3ನೇ ತಪಾಸಣಾ ಸಂಸ್ಥೆಯಿಂದ ಕೈಗೊಳ್ಳುವ ಬಗ್ಗೆ.

<u>ನಿರ್ಣಯ</u>: 2018-19 ಹಾಗೂ 2019-20ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಳ್ಳುವ ಕೆಳಕಂಡ ಕೆಲಸಗಳ ತಪಾಸಣೆ ಕೈಗೊಳ್ಳಲು 3ನೇ ತಪಾಸಣಾ ಸಂಸ್ಥೆಗಳಿಂದ ನಾಲ್ಕು ಕಂದಾಯ ವಿಭಾಗವಾರು ಟೆಂಡರ್‌ಗಳನ್ನು ವರ್ಷವಾರು ಪ್ರತ್ಯೇಕವಾಗಿ ಆಹ್ವಾನಿಸಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುವ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಈ ಸಾಲುಗಳ ಕೊಳವೆ ಬಾವಿಗಳಿಗೆ ಅಳವಡಿಸುವ ಕೇಸಿಂಗ್ ಪೈಪ್‌ಗಳ ಗುಣಮಟ್ಟ ಹಾಗೂ ಶೇ.10ರಷ್ಟು ಕೊಳವೆ ಬಾವಿಗಳ ತಪಾಸಣೆಯನ್ನು ಕೈಗೊಳ್ಳಬೇಕಾಗಿರುವುದರಿಂದ ಪ್ರಸ್ತುತ 3ನೇ ತಪಾಸಣಾ ಸಂಸ್ಥೆಯ ನೇಮಕದ ಬಗ್ಗೆ ಕರೆದಿರುವ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ 2016-17 ಹಾಗೂ 2017-18 ನೇ ಸಾಲಿನಲ್ಲಿ ಈ ನಿಗಮದ ಕೆಲಸವನ್ನು ಒಳಪಡಿಸಿ ಡಾ||ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಜಿಲ್ಲಾ ಮಟ್ಟದಲ್ಲಿ ಆಹ್ವಾನಿಸಿದ ಟೆಂಡರ್‌ನಲ್ಲಿ ನೇಮಕವಾಗಿರುವ 3ನೇ ತಪಾಸಣಾ ಸಂಸ್ಥೆಗಳ ಸೇವೆಯನ್ನು ತಾತ್ಕಲಿಕವಾಗಿ ಪಡೆದುಕೊಳ್ಳಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-18(3)</u>: 2018-19ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯಿಸುವ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳ ಸರಬರಾಜು, ಅಳವಡಿಕೆ ಹಾಗೂ ವಿದ್ಯುದ್ದೀಕರಣ ಕೆಲಸ ಕೈಗೊಳ್ಳಲು ದರ ಹಾಗೂ ಏಜೆನ್ಸಿಗಳನ್ನು ಅನುಮೋದಿಸುವ ಬಗ್ಗೆ.

<u>ನಿರ್ಣಯ</u>: 2018-19ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯಿಸುವ ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳ ಸರಬರಾಜು, ಅಳವಡಿಕೆ ಹಾಗೂ ವಿದ್ಯುದ್ದೀಕರಣ ಕೆಲಸ ಕೈಗೊಳ್ಳಲು 29 ಪ್ಯಾಕೇಜ್‌ಗಳಲ್ಲಿ ಟೆಂಡರ್ ಆಹ್ವಾನಿಸಿ, ಟೆಂಡರ್ ಅಂಗೀಕಾರ ಪ್ರಾಧಿಕಾರ ಪ್ಯಾಕೇಜ್‌ವಾರು ಅಂಗೀಕರಿಸಿರುವ ಎಲ್-1 ದರಗಳು ಹಾಗೂ ಎಲ್-1 ಟೆಂಡರ್‌ದಾರರ ವಿವರಗಳನ್ನು ಸಭೆಯಲ್ಲಿ ಪರಿಶೀಲಿಸಿ ಈ ಬಗ್ಗೆ ಚರ್ಚಿಸಲಾಯಿತು.

ಪ್ರತಿ ಪ್ಯಾಕೇಜ್‌ನಲ್ಲಿ 11 ವಿವಿಧ ಸಾಮರ್ಥ್ಯದ ಪಂಪ್‌ಸೆಟ್‌ಗಳಿಗೆ ಹಾಗೂ ಪೂರಕ ಸಾಮಗ್ರಿಗಳಿಗೆ ದರ ನಮೂದಿಸಬೇಕಾಗಿದ್ದು, ಕೆಲವು ಪ್ಯಾಕೇಜ್‌ಗಳಲ್ಲಿ ಒಂದಕ್ಕಿಂತ ಹೆಚ್ಚು ಬಿಡ್‌ದಾರರು ವಿವಿಧ ಪಂಪ್‌ಸೆಟ್‌ಗಳಿಗೆ ಎಲ್-1 ಬಿಡ್‌ದಾರರಾಗಿರುವ ಬಗ್ಗೆ ಪರಿಶೀಲಿಸಲಾಯಿತು. ಇದರಂತೆ ಬಿಡ್‌ದಾರರು ನಮೂದಿಸಿರುವ ಎಲ್-1 ದರಗಳನ್ನು

ಅಂಗೀಕರಿಸಿ ಒಟ್ಟಾರೆ ಪ್ಯಾಕೇಜ್‌ಗೆ ಎಲ್-1 ದರಗಳನ್ನು ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು.

ಈ ವಿಧಾನದಂತೆ 11 ವಿವಿಧ ಸಾಮರ್ಥ್ಯದ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳ ಸರಬರಾಜು, ಅಳವಡಿಕೆ ಹಾಗೂ ವಿದ್ಯುದ್ದೀಕರಣ ಕೆಲಸಗಳಿಗೆ ಅಂಗೀಕರಿಸಿದ ಎಲ್-1 ದರಗಳನ್ನು ಆಯಾ ಪ್ಯಾಕೇಜ್‌ಗೆ ಅಳವಡಿಸಿಕೊಂಡು ಬಿಡ್‌ದಾರರ Assessed capacity ಗೆ ಅನುಗುಣವಾಗಿ ಪ್ಯಾಕೇಜ್‌ಗಳನ್ನು ಹಂಚಿಕೆ ಮಾಡಿ ಬಾಕಿ ಉಳಿಯುವ ಪ್ಯಾಕೇಜ್‌ಗಳಿಗೆ ಆಯಾ ಪ್ಯಾಕೇಜ್‌ನ ಎಲ್-2/ಎಲ್-3 ಟೆಂಡರ್‌ದಾರರಿಗೆ ಪ್ಯಾಕೇಜ್‌ನ ಎಲ್-1 ದರದಂತೆ ಕಾರ್ಯಾದೇಶ ನೀಡಲು ತೀರ್ಮಾನಿಸಲಾಯಿತು.

<u>ವಿಷಯ ಸಂಖ್ಯೆ-18(4):</u> ದಿ॥ ಡಿ.ದೇವರಾಜ ಅರಸು ರವರ 38ನೇ ಪುಣ್ಯ ಸ್ಮರಣೆಯನ್ನು ದಿನಾಂಕ:06.06.2020 ರಂದು ಆಚರಿಸುವ ಸಂಬಂಧ ತಗಲುವ ವೆಚ್ಚವನ್ನು ನಿಗಮದಿಂದ ಭರಿಸುವ ಬಗ್ಗೆ.

<u>ನಿರ್ಣಯ:</u> ದಿ॥ಡಿ.ದೇವರಾಜ ಅರಸು ರವರ 38ನೇ ಪುಣ್ಯ ಸ್ಮರಣೆಯನ್ನು ದಿನಾಂಕ:06.06.2020 ರಂದು ಆಚರಿಸುವ ಸಂಬಂಧ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:19.05.2020 ರಂದು ನಡೆದ ಸಭೆಯ ನಡವಳಿಯಲ್ಲಿ ಡಿ.ದೇವರಾಜ ಅರಸು ರವರ 38ನೇ ಪುಣ್ಯ ಸ್ಮರಣೆಯನ್ನು ಆಚರಿಸಲು ಲೆಕ್ಕ ಶೀರ್ಷಿಕೆ 2225-03-277-2-08ರ ಆಬ್ಜೆಕ್ಟೀವ್ ಕೋಡ್-059ರಲ್ಲಿ ಆರ್ಥಿಕ ಇಲಾಖೆಯಿಂದ ಅನುದಾನ ಬಿಡುಗಡೆಯಾಗಿಲ್ಲದ ಕಾರಣ ಈ ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದಲೇ ಭರಿಸುವಂತೆ ಮಾನ್ಯ ಆಯುಕ್ತರು ಸೂಚಿಸಿರುತ್ತಾರೆ. ದಿ॥ಡಿ.ದೇವರಾಜ ಅರಸು ರವರ 38ನೇ ಪುಣ್ಯ ಸ್ಮರಣೆಯನ್ನು ದಿನಾಂಕ:06.06.2020 ರಂದು ಆಚರಿಸಲು ತಗಲುವ ವೆಚ್ಚವನ್ನು ನಿಗಮದಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಬಿಡುಗಡೆ ಮಾಡಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ-18(5): ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವ್ಯಾಪ್ತಿಯಡಿ ಒಳಪಡುವ ನಿಗಮ/ಮಂಡಳಿಗಳಲ್ಲಿ ಸರ್ಕಾರದಿಂದ ನಾಮ ನಿರ್ದೇಶಿತ ಅಧಿಕಾರಿಯುತ ನಿರ್ದೇಶಕರುಗಳಿಗೆ ಆಸೀನತೆ ಶುಲ್ಕವನ್ನು (Sitting fee) ನಿಗಧಿಪಡಿಸುವ ಬಗ್ಗೆ.

ನಿರ್ಣಯ: ಸರ್ಕಾರದ ಆದೇಶ ಸಂಖ್ಯೆ: ಸಾಉಇ 09 ಎಆರ್‌ಯು 2019 ದಿನಾಂಕ 31-01-2020ರಲ್ಲಿ ಕರ್ನಾಟಕ ಸ್ವಾಮ್ಯದ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ವ್ಯಾಪ್ತಿಯಡಿ ಒಳಪಡುವ 60 ನಿಗಮ/ಮಂಡಳಿಗಳಲ್ಲಿ ಸರ್ಕಾರದಿಂದ ನಾಮ ನಿರ್ದೇಶಿತ ಅಧಿಕಾರಿಯುತ ನಿರ್ದೇಶಕರುಗಳಿಗೆ ಪ್ರತಿ ಮಂಡಳಿ ಸಭೆ ಮತ್ತು ಉಪ ಸಮಿತಿ ಸಭೆಗೆ ಅಸೀನತೆ ಶುಲ್ಕವನ್ನು (Sitting fee) ಕನಿಷ್ಠ ರೂ.2,000/-ಗಳ ಭತ್ಯೆಯನ್ನು ನಿಗಧಿಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಲಾಗಿದೆ. ಈ ಆದೇಶವನ್ನು ಈ ನಿಗಮದಲ್ಲಿ ಅಳವಡಿಸಿಕೊಂಡು ನಾಮ ನಿರ್ದೇಶಿತ ಅಧಿಕಾರಿಯುತ ನಿರ್ದೇಶಕರುಗಳಿಗೆ ಪ್ರತಿ ಮಂಡಳಿ ಸಭೆ ಮತ್ತು ಉಪ ಸಮಿತಿ ಸಭೆಯ ಆಸೀನತೆಗೆ ರೂ.2,000/-ಗಳ ಶುಲ್ಕವನ್ನು ನೀಡಲು ತೀರ್ಮಾನಿಸಲಾಯಿತು.

ಸ್ಥಳ: ಬೆಂಗಳೂರು
ದಿನಾಂಕ: 29-05-2020

(ಮೊಹಮದ್ ಮೊಹಸಿನ್.ಐ.ಎ.ಎಸ್)
ಅಧ್ಯಕ್ಷರು

1) GM (A)
2) AGM/PO-2/4
3) AEE
4) GM(F&A)

10/6/20
10.6.20